99

ಭಾರತೀಯ ಸ್ವಾತಂತ್ರ್ಯ ಸಂಗ್ರಾಮ

★

ಲೇಖಕರು:

ಶ್ರೀ। ಎಸ್. ರಘುನಂದನ ರಾವ್,

ತಲ್ಲೂರು. (ದ. ಕ.)

1956.

ಒಂದಾಣೆ ಮಾಲೆ

ಭಾರತೀಯ ಸ್ವಾತಂತ್ರ್ಯಸಂಗ್ರಾಮ

ಝಾನ್ಸಿರಾಣಿ ಲಕ್ಷ್ಮೀಬಾಯಿಯ ನೇತೃತ್ವದಲ್ಲಿ ೧೮೫೭ರಲ್ಲಿ ನಡೆದ ಸಂಗ್ರಾಮವು (ಸಿಪಾಯಿದಂಗೆ) ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮವಾಗಿದೆ.* ನಾಭಾ, ಪತಿಯಾಳ ಮೊದಲಾದ ರಾಜರು ದೇಶದ್ರೋಹವೆಸಗಿ, ಬ್ರಿಟಿಷರಿಗೆ ಸಹಾಯವಿತ್ತು, ಈ ಸಂಗ್ರಾಮವು ವಿಫಲವಾಯಿತು. ಜನತೆಯು ಕ್ರೂರವಾಗಿ ಶಿಕ್ಷಿಸಲ್ಪಟ್ಟಿತು. ಉದ್ವಿಗ್ನಗೊಂಡ ಭಾರತೀಯ ಜನತೆಯನ್ನು ಶಾಂತಗೊಳಿಸಲು ಆಗಿನ ಇಂಗ್ಲಂಡಿನ ರಾಜ್ಞಿ ವಿಕ್ಟೋರಿಯಳು ಶಾಂತಿಘೋಷಣೆ ಮಾಡಿದಳು. ೧೮೫೮ರಲ್ಲಿ ಕಂಪೆನಿಯ ಆಳ್ವಿಕೆ ಕೊನೆಗೊಂಡು, ಭಾರತದ ರಾಜ್ಯಭಾರವನ್ನು ಆಂಗ್ಲ ಪಾರ್ಲಿಮೆಂಟು ವಹಿಸಿಕೊಂಡಿತು. ಭಾರತವನ್ನಾಳಲು ಪಾರ್ಲಿಮೆಂಟಿನ ಪರವಾಗಿ ಇಂಗ್ಲೆಂಡಿನಿಂದ ವೈಸರಾಯಿಯು ಕಳುಹಿಸಲ್ಪಡುತ್ತಿದ್ದನು. ಈ ವೈಸರಾಯಿಗಳಲ್ಲಿ ಹಲವರು ದಬ್ಬಾಳಿಕೆ ನಡೆಸಿದರು; ಆದರೆ, ಕೆಲವರು ಜನಪ್ರೀತರೂ ಆದರು. ದಬ್ಬಾಳಿಕೆ ನಡೆಸಿದ ವೈಸರಾಯಿಗಳ ವರ್ತನೆಯನ್ನು ಖಂಡಿಸಿ ವಾರ್ತಾಪತ್ರಿಕೆಗಳು ಬರೆಯಲಾರಂಭಿಸಿದುದರಿಂದ ಸರಕಾರದ ದೃಷ್ಟಿಯು ಅವುಗಳೆಡೆಗೆ ಹರಿಯಿತು. ವಾರ್ತಾಪತ್ರಿಕೆಗಳ ಸ್ವಾತಂತ್ರ್ಯಾಪಹರಣ ಮಾಡಲು 'ಪ್ರೆಸ್ ಆಕ್ಟ್' ಎಂಬ ಕಾನೂನನ್ನು ಸರಕಾರವು ಜ್ಯಾರಿಗೆ ತಂದಿತು. ಹಿಂದೆ ೧೮೫೭ರಲ್ಲಿ ನಡೆದ ಸಶಸ್ತ್ರ ಸಂಗ್ರಾಮದಿಂದ ದಿಗಿಲುಗೊಂಡಿದ್ದ ಸರಕಾರದವರು 'ಆರ್ಮ್ಸ್ ಆಕ್ಟ್' ಎಂಬ ಕಾಯಿದೆಯನ್ನು ತಂದು ತಮ್ಮ ಸಂರಕ್ಷಣೆಮಾಡಿಕೊಳ್ಳಲಾರಂಭಿಸಿದರು. ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿ ಹಿಂದೀಯರಿಗೆ ಪ್ರವೇಶವಿರಲಿಲ್ಲ. ಈ ಎಲ್ಲ ಕುತಂತ್ರಗಳ ಮೂಲಕ ಭಾರತೀಯರ ಸ್ವಾತಂತ್ರ್ಯಾಪಹರಣ ಯತ್ನವು ನಡೆದಿತ್ತು.

---

*ಒಂದಾಣೆ ಮಾಲೆಯಲ್ಲಿ ಪ್ರಕಟವಾಗಿರುವ "ಸಿಪಾಯಿದಂಗೆ" (ಪುಸ್ತಕ ನಂಬ್ರ 46) ಓದಿರಿ.

ಪಾರತಂತ್ರ್ಯವನ್ನು ಸಹಿಸಲಾಗದೇ ಮೇಧಾವಿಗಳಾದ ಅನೇಕ ಭಾರತೀಯರು ರಾಜಕೀಯ ಸಂಸ್ಥೆಯೊಂದರ ಸ್ಥಾಪನೆಗೈದು ತನ್ಮೂಲಕ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದು ನಿರ್ಧರಿಸಿದರು. ಮದರಾಸಿನ ಉಪನಗರವಾದ ಅಡ್ಯಾರದಲ್ಲಿ ಜರಗಲಿದ್ದ ಥಿಯೋಸೊಫಿಕಲ್ ಸೊಸೈಟಿಯ ವಾರ್ಷಿಕ ಅಧಿವೇಶನಕ್ಕೆ ಬಂದ ೧೭ ಮಂದಿ ಪ್ರತಿನಿಧಿಗಳು ಸೇರಿ, ಮೇಲೆ ಹೇಳಿದ ಉದ್ದೇಶಕ್ಕಾಗಿ ರಾಜಕೀಯ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಬಗೆದರು. ೧೮೮೫ರ ದಶಂಬರ ೨೭ರಂದು ಆಂಗ್ಲ ಮಹನೀಯರಾಗಿದ್ದ ಸಿವಿಲ್ ಸರ್ವಿಸಿನ ನಿವೃತ್ತ ಅಧಿಕಾರಿ ಮಿ। ಎಲ್ಲನ್ ಒಕ್ಟೇವಿಯಸ್ ಹ್ಯೂಮ್ ಎಂಬವರ ಪ್ರೋತ್ಸಾಹದಿಂದ ಭಾರತ ರಾಷ್ಟ್ರೀಯ ಕೊಂಗ್ರೆಸ್ ಎಂಬ ಸಂಸ್ಥೆಯು ಸ್ಥಾಪಿತವಾಯಿತು. ಇದರ ಪ್ರಥಮಾಧಿವೇಶನವು ಶ್ರೀ। ಉಮೇಶಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಮುಂಬಯಿಯ ಗೋಕುಲದಾಸ ತೇಜಪಾಲ ಸಂಸ್ಕೃತ ಕೊಲೇಜಿನಲ್ಲಿ ನಡೆಯಿತು.

೧೮೮೫ರಿಂದ ೧೯೦೭ರ ತನಕ ಸೌಮ್ಯವಾದಿಗಳು ಕೊಂಗ್ರೆಸ್ಸಿನ ಸೂತ್ರಧಾರರಾದರು. ಸೌಮ್ಯವಾದಿಗಳ ಮುಖಂಡರಾಗಿದ್ದ ಶ್ರೀ। ಗೋಪಾಲ ಕೃಷ್ಣ ಗೋಖಲೆ ಮತ್ತು ಸರ್ ಫಿರೋಜ್ ಷಾ ಮೇಥಾ— ಇವರು ಸರಕಾರದೊಡನೆ ಸಹಕರಿಸಿ, ಆಗ ಜ್ಯಾರಿಯಲ್ಲಿದ್ದ ಹಲವು ಶಾಸನಗಳನ್ನು ತಿದ್ದುಪಡಿ ಮಾಡಬೇಕೆಂದು ಕೇಳಿಕೊಂಡರು. ಈ ಕೇಳಿಕೆಗಳಲ್ಲಿ (೧) ಸೈನ್ಯಖಾತೆಯ ಖರ್ಚನ್ನು ಕಡಿಮೆಮಾಡುವುದು. (೨) ಐ. ಸಿ. ಎಸ್.ನಲ್ಲಿ ಹಿಂದೀಯರಿಗೆ ಪ್ರವೇಶ. (೩) 'ಆರ್ಮ್ಸ್ ಆಕ್ಟ್'ನಲ್ಲಿ ತಿದ್ದುಪಡಿ. (೪) ಉಪ್ಪಿನ ಕರದಲ್ಲಿ ರೂಪಾಂತರ. (೫) ರಾಜದ್ರೋಹ ಕಾಯಿದೆಯಲ್ಲಿ ತಿದ್ದುಪಡಿ. (೬) ಉಚ್ಚಾಧಿಕಾರಗಳಲ್ಲಿ ಹಿಂದೀಯರ ನೇಮಕ. (೭) ನ್ಯಾಯ ಇಲಾಖೆಯಲ್ಲಿ ಪಂಚಾಯತಿ ಪದ್ಧತಿಯ ಕೇಳಿಕೆ. (೮) ನ್ಯಾಯ ಹಾಗೂ ಕಾರ್ಯನಿರ್ವಾಹಕ ಇಲಾಖೆಗಳ ಪ್ರತ್ಯೇಕೀಕರಣ— ಇವುಗಳು ಮುಖ್ಯವಾಗಿದ್ದುವು. ಇವುಗಳಲ್ಲಿ ಕೆಲವು ಮಾತ್ರ ಸುಧಾರಣೆಹೊಂದಿದುವು.

ಸೌಮ್ಯವಾದಿಗಳ ಮಂದ ಧೋರಣೆಯನ್ನು ಕೆಲವರು ದೇಶಪ್ರೇಮಿಗಳು ಮೆಚ್ಚಲಿಲ್ಲ. ಕೊಂಗ್ರೆಸ್ಸು ಉಗ್ರಧೋರಣೆಯನ್ನು ವಹಿಸಿದರೆ ಮಾತ್ರ ತನ್ನ ಧ್ಯೇಯಸಾಧನೆಯಲ್ಲಿ ಜಯಶಾಲಿಯಾಗಬಹುದೆಂದು ಅವರು ಸಾರಿದರು. ಉಗ್ರವಾದಿಗಳ ಸಂಖ್ಯೆಯು ಮಹಾರಾಷ್ಟ್ರ ಮತ್ತು ವಂಗ

ಪ್ರಾಂತ್ಯಗಳಲ್ಲಿ ದಿನೇ ದಿನೇ ವೃದ್ಧಿಯಾಗತೊಡಗಿತು. ವಂಗಪ್ರಾಂತ್ಯದಲ್ಲಿ ಉಜ್ವಲ ದೇಶಪ್ರೇಮಿ ಸ್ವಾಮಿ ವಿವೇಕಾನಂದರೂ, ಮಹಾರಾಷ್ಟ್ರದಲ್ಲಿ 'ಮಹಾರಾಷ್ಟ್ರದ ಕೇಸರಿ' ಲೋಕಮಾನ್ಯ ಬಾಲಗಂಗಾಧರ ತಿಲಕ್- ಇವರೂ ತಮ್ಮ ಉಜ್ವಲ ಭಾಷಣ ಮತ್ತು ಲೇಖನಗಳಿಂದ ಜನಜಾಗೃತಿಯನ್ನುಂಟು ಮಾಡಿದರು. ಕಾಂಗ್ರೆಸ್ಸಿನ ವರ್ಚಸ್ಸು ದಿನೇ ದಿನೇ ಹೆಚ್ಚುತ್ತ ಹೋದುದರಿಂದ ಸರಕಾರದ ವಕ್ರದೃಷ್ಟಿಯು ಅದರೆಡೆಗೆ ಹರಿಯಿತು. ಮೊದಲು ತನಗೆ ಸಹಕಾರಿಯಾಗಿದ್ದ ಕಾಂಗ್ರೆಸ್ಸು, ಈಗ ತನಗೆ ವಿರೋಧವಾಗಿ ವರ್ತಿಸುವುದನ್ನು ಕಂಡು ಸರಕಾರವು ಕಿಡಿಯನ್ನೇ ಕಾರತೊಡಗಿತು.

೧೯೦೫ನೆಯ ಇಸವಿ. ವೈಸರಾಯಿ ಕರ್ಝನನು ಕಾಂಗ್ರೆಸ್ಸಿನ ವರ್ಚಸ್ಸನ್ನು ಮುರಿಯಬೇಕೆಂದು ಬಗೆದು ವಂಗಪ್ರಾಂತವನ್ನು ವಿಭಜಿಸಿದನು. ಕಾಂಗ್ರೆಸ್ಸನ್ನು ಅಧಃಪತನಗೊಳಿಸುವುದರ ಮೂಲಕ ರಾಷ್ಟ್ರದಲ್ಲಿ ಬಿಕ್ಕಟ್ಟನ್ನುಂಟುಮಾಡಬೇಕೆಂಬ ಅವನ ಯೋಜನೆ ಮಾತ್ರ ಫಲಕಾರಿಯಾಗಲಿಲ್ಲ. ತಿಲಕರ ಮತ್ತು ವಿವೇಕಾನಂದರ ಭಾಷಣಗಳಿಂದ ಜಾಗೃತವಾಗಿದ್ದ ಜನತೆಯು ಕಾಂಗ್ರೆಸ್ಸಿನೊಂದಿಗೆ ಸಹಕರಿಸಿ, ಸರಕಾರದ ಕುತಂತ್ರವನ್ನು ವಿರೋಧಿಸಿ, ಚಳವಳ ಹೂಡಲು ಸಿದ್ಧವಾಯಿತು. ಮಹರ್ಷಿ ಅರವಿಂದ ಘೋಷ್ ಮತ್ತು ಬಿಪಿನ್‌ಚಂದ್ರಪಾಲರು ಪರದೇಶೀ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಜನತೆಯನ್ನು ಕೇಳಿಕೊಂಡರು. ಸ್ವದೇಶೀ ವಸ್ತುಗಳ ಪ್ರಚಾರಕ್ಕಾಗಿ ದೇಶದಲ್ಲಿ ಚಳವಳ ಪ್ರಾರಂಭವಾಯಿತು. ಇದು "ಸ್ವದೇಶೀ ಚಳವಳ"ವೆಂದು ಪ್ರಸಿದ್ಧವಾಗಿದೆ. ರಾಷ್ಟ್ರೀಯ ಶಿಕ್ಷಣ, ಪರದೇಶೀ ವಸ್ತುಗಳ ಬಹಿಷ್ಕಾರ, ಸ್ವದೇಶೀ ವಸ್ತುಗಳ ತಯಾರಿಕೆ ಹಾಗೂ ಸ್ವರಾಜ್ಯ—ಇವು ಚಳವಳದ ಮುಖ್ಯ ಕಾರ್ಯಾಂಗಗಳಾಗಿದ್ದುವು. ದಿನ ಹೋದಂತೆ ಪರದೇಶೀ ವಸ್ತುಗಳಿಗೆ ಗಿರಾಕಿಗಳು ಕಡಿಮೆಯಾಗುತ್ತ ಬಂದರು. ೧೯೦೬ರ ಕಲ್ಕತ್ತದ ಕಾಂಗ್ರೆಸ್ಸಿನ ಅಧ್ಯಕ್ಷಪೀಠದಿಂದ 'ಭಾರತದ ಪಿತಾಮಹ' ದಾದಾಭಾಯಿ ನೌರೋಜಿಯವರು 'ಸ್ವರಾಜ್ಯವೇ ಕಾಂಗ್ರೆಸ್ಸಿನ ಧ್ಯೇಯ'ವೆಂದು ಸಾರಿದುದನ್ನು ಕೇಳಿ, ಸರಕಾರಕ್ಕೆ ಎಚ್ಚರವಾಯಿತು. ಸ್ವದೇಶೀ ಚಳವಳವು ಭರದಿಂದ ಸಾಗಿದುದರಿಂದ ೧೯೧೧ರ ದಿಲ್ಲೀ ದರ್ಬಾರಿನಲ್ಲಿ ಐದನೇ ಜಾರ್ಜ್ ಚಕ್ರವರ್ತಿಯು ವಂಗ ಪ್ರಾಂತ್ಯವು ಒಂದಾಗುವಂತೆ ಸಾರಿದನು. ಹೀಗೆ ವಿಭಕ್ತವಂಗವು ತಿರುಗಿ ಅಖಂಡವಾಯಿತು.

ವಂಗ ಪ್ರಾಂತ್ಯದ ಐಕ್ಯಕ್ಕಾಗಿ ನಡೆದ ಚಳವಳಿಯ ವಿಜಯದಿಂದ ಲೋಕಮಾನ್ಯ ತಿಲಕರಿಗೆ ತುಂಬಾ ಯಶಸ್ಸು ದೊರೆಯಿತು. ಅವರ ನೇತೃತ್ವದಲ್ಲಿ ಉಗ್ರವಾದಿ ಗುಂಪಿನ ರಚನೆಯಾಯಿತು. ತಿಲಕರ 'ಕೇಸರಿ' ಪತ್ರಿಕೆಯು ರಾಷ್ಟ್ರವನ್ನು ನಿದ್ದೆಯಿಂದ ಹೊಡೆದೆಬ್ಬಿಸಿತು. ೧೯೦೭ರ ಸೂರತ್ ಅಧಿವೇಶನದಲ್ಲಿ ಉಗ್ರ ಮತ್ತು ಸೌಮ್ಯವಾದಿಗಳೊಳಗೆ ಘರ್ಷಣೆ ನಡೆದು, ತತ್ಪರಿಣಾಮವಾಗಿ ಆ ವರ್ಷ ಕೊಂಗ್ರೆಸ್ಸು ಮುರಿದು, ಕೊಂಗ್ರೆಸ್ಸಿನಲ್ಲಿಯೇ ಉಗ್ರಗಾಮಿ ಮತ್ತು ಮಂದಗಾಮಿಗಳೆಂಬ ಇಬ್ಬಣಗಳುಂಟಾದುವು. ೧೯೦೭ರಿಂದ ೧೯೧೬ರ ವರೆಗೆ ಉಗ್ರವಾದಿಗಳು ಕೊಂಗ್ರೆಸ್ಸಿನ ಸೂತ್ರಧಾರರಾದರು.

೧೯೦೮ರಲ್ಲಿ 'ಕೇಸರಿ' ಪತ್ರಿಕೆಯಲ್ಲಿ ಬರೆದ ಲೇಖನವೊಂದನ್ನು ಆಕ್ಷೇಪಿಸಿ ಸರಕಾರವು ತಿಲಕರ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿ, ಅವರನ್ನು ಬರ್ಮದ ಮಂಡಾಲೆಗೆ ಗಡಿಪಾರುಮಾಡಿತು. ಆರು ವರ್ಷಗಳ ನಂತರ, ೧೯೧೪ರ ಜೂನಿನಲ್ಲಿ ಅವರ ಬಿಡುಗಡೆಯಾಯಿತು. ಅದೇ ವರ್ಷದ ಆಗಸ್ಟ್ ತಿಂಗಳಲ್ಲಿ ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾಯಿತು. ತಿಲಕರು ಪುನಃ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ, "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು; ನಾನದನ್ನು ಸಾಧಿಸಿಯೇ ತೀರುವೆನು" ಎಂದು ಗರ್ಜಿಸಿದರು. ಡಾ| ಎನಿಬಿಸೆಂಟರವರ ನೇತೃತ್ವದಲ್ಲಿ ನಡೆಯುತ್ತಿದ್ದ 'ಹೋಮ್ ರೂಲ್' ಚಳವಳಿಯಲ್ಲಿ ಧುಮುಕಿ, ಆ ಮಹಿಳೆಗೆ ಸಂಪೂರ್ಣ ಬೆಂಬಲವಿತ್ತು ಹೋರಾಡಿದರು. ೧೯೧೫ರಿಂದ ೧೯೧೭ರ ತನಕ ಈ ಚಳವಳವು ಭರದಿಂದ ಸಾಗಿತು.

೧೯೧೬ರಲ್ಲಿ ಶ್ರೀ| ಅಂಬಾಚರಣ ಮುಜುಮ್‌ದಾರರವರ ಅಧ್ಯಕ್ಷತೆಯಲ್ಲಿ ಕೊಂಗ್ರೆಸ್ಸು ಲಖನೌದಲ್ಲಿ ಸೇರಿತು. ಈ ಅಧಿವೇಶನದಲ್ಲಿ ಸೌಮ್ಯವಾದಿಗಳೂ, ಉಗ್ರವಾದಿಗಳೂ ಒಂದಾದರು. ಹೋಮ್‌ರೂಲ್ ಚಳವಳಕ್ಕೆ ಇಬ್ಬರ ಬೆಂಬಲವೂ ದೊರೆಯಿತು. ಕೊಂಗ್ರೆಸ್ ಮತ್ತು ಮುಸ್ಲಿಂ ಲೀಗ್—ಒಂದು ಒಪ್ಪಂದವನ್ನು ಮಾಡಿಕೊಂಡು, ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದು ನಿರ್ಣಯಿಸಿದುವು.

ಹೋಮ್‌ರೂಲ್ ಚಳವಳಿಯ ನೇತೃವಾಗಿ ರಾಷ್ಟ್ರದಾದ್ಯಂತ ಪ್ರಚಾರಮಾಡಿದುದಕ್ಕಾಗಿ ೧೯೧೭ರಲ್ಲಿ ಡಾ| ಎನ್ನಿಬಿಸೆಂಟರನ್ನು ಸರಕಾರವು ಬಂಧಿಸಿತು. ಅದೇ ವರ್ಷ ಭಾರತ ಮಂತ್ರಿ ಮೊಂಟೆಗ್ಯೂರವರು ಭಾರತ

ದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ಆಂಗ್ಲ ಸರಕಾರವು ಯತ್ನಿಸುತ್ತಿದೆಯೆಂದು ಘೋಷಿಸಿದರು. ಆದರೆ, ಜಾತೀಯ ಪ್ರಾತಿನಿಧ್ಯಕ್ಕೆ ಮನ್ನಣೆಯಿತ್ತು ದ್ವಿದಳ ರಾಜಪದ್ಧತಿಯಲ್ಲಿ ರಾಜ್ಯಭಾರ ನಡೆಯಿಸಲು ಆರಂಭವಾಯಿತು. ದೇಶದಲ್ಲಿ ಅಸಮಾಧಾನವೇ ತಲೆದೋರಿತು.

೧೯೧೪ರಲ್ಲಿ ಜಾಗತಿಕ ಯುದ್ಧವಾರಂಭವಾದಾಗ, ಈ ಯುದ್ಧದಲ್ಲಿ ಭಾರತವು ಇಂಗ್ಲೆಂಡಿಗೆ ಸಹಾಯಮಾಡಿದಲ್ಲಿ ಸ್ವಾತಂತ್ರ್ಯ ಕೊಡುವ ಪ್ರಕಟನೆಯೊಂದನ್ನು ಪ್ರಕಟಿಸಲಾಗಿತ್ತು. ಭಾರತವು ಇಂಗ್ಲೆಂಡಿಗೆ ಸಹಾಯಮಾಡಿತು. ಆದರೆ, ಮಹಾಯುದ್ಧವು ಮುಗಿದು ವರ್ಷವಲಿ ಒಪ್ಪಂದವಾದರೂ ಸ್ವಾತಂತ್ರ್ಯ ದೊರೆಯುವ ಚಿಹ್ನೆಗಳು ಕಾಣಲಿಲ್ಲ. ಇದರಿಂದ ಅತೃಪ್ತರಾದ ನಮ್ಮ ಧುರೀಣರು ಬ್ರಿಟಿಷ್ ಸರಕಾರದ ಛಲದ ಕ್ರೂರ ಆಳ್ವಿಕೆಯನ್ನು ವಿರೋಧಿಸಿ ಭಾಷಣಮಾಡಿದರು. ಕ್ರಾಂತಿಕಾರಕ ಚಳವಳಿಗಳನ್ನು ಹತ್ತಿಕ್ಕಲು ಸರ್ ಸಿಡ್ನಿ ರೌಲೆಟ್ ಸಾಹೇಬನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸರಕಾರವು ನೇಮಿಸಿತು. ೧೯೧೬ರಲ್ಲಿ ರೌಲೆಟ್ ಆಕ್ಟ್ ಜಾರಿಗೆ ಬಂದಿತು. ಈ ಆಕ್ಟಿನ ಪ್ರಕಾರ ಚಳವಳಗಾರರನ್ನು ಪಂಚಾಯತು ರಹಿತವಾಗಿ (ವಿಚಾರಣೆಯಿಲ್ಲದೆ) ದಂಡಿಸಲು ಸಮಿತಿಯು ಅಧಿಕಾರಹೊಂದಿತು. ಸಮಗ್ರ ದೇಶದಲ್ಲಿ ದಬ್ಬಾಳಿಕೆಯೇ ಆರಂಭವಾಯಿತು. ಆಗ ದಕ್ಷಿಣ ಆಫ್ರಿಕದಲ್ಲಿ ವಿಜಯಿಯಾಗಿ ಸ್ವದೇಶಕ್ಕೆ ಮರಳಿದ್ದ ಮೋಹನದಾಸ ಕರಮಚಂದ ಗಾಂಧಿಯವರು ಕೊಂಗ್ರೆಸ್ಸಿನ ಸೂತ್ರಧಾರರಾದರು. ಸರಕಾರ ನಡೆಸಿದ ಅನ್ಯಾಯವನ್ನು ವಿರೋಧಿಸಿ, ಎಪ್ರಿಲ್ ೬ರಂದು ಸಮಗ್ರ ಭಾರತದಲ್ಲಿ ಹರತಾಳವನ್ನಾಚರಿಸಬೇಕೆಂದು ಸಾರಿದರು. ಜನತೆ ಗಾಂಧೀಜಿಯವರಿಗೆ ಬೆಂಬಲವನ್ನಿತ್ತಿತು. ೧೯೧೯ರಿಂದ 'ರಾಜಕೀಯದಲ್ಲಿ ಸತ್ಯಾಗ್ರಹವೆಂಬ ಅಸ್ತ್ರವನ್ನುಪಯೋಗಿಸಿ, ಸರಕಾರ ಕೊಡುತ್ತಿದ್ದ ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕೆಂದು ಸಾರಿದವರು ಗಾಂಧೀಜಿ. ದಿಲ್ಲಿ ಮೊದಲಾದೆಡೆಗಳಲ್ಲಿ ಹರತಾಳವು ಎಪ್ರಿಲ್ ೩೦ಕ್ಕೆ ಪ್ರಾರಂಭವಾಯಿತು.

ಎಪ್ರಿಲ್‌ನಲ್ಲಿಯೇ ಅಮೃತಸರದ ಜಲಿಯನ್‌ವಾಲಾ ಬಾಗ್‌ದಲ್ಲಿ ಸಾರ್ವಜನಿಕ (ರಾಜಕೀಯ) ಸಭೆಯೊಂದು ನೆರೆದಿತ್ತು. ಗಂಡಸರೂ, ಹೆಂಗಸರೂ, ಮಕ್ಕಳೂ ಕೂಡಿ ಸುಮಾರು ಇಪ್ಪತ್ತು ಸಾವಿರ ಜನರು ಆ ಸಭೆಯಲ್ಲಿ ಕೂಡಿದ್ದರು. ಹಂಸರಾಜ ಎಂಬ ಮಹನೀಯರೋರ್ವರು ಈ

ಬೃಹದ್ಸಭೆಯುನ್ನುದ್ದೇಶಿಸಿ ಭಾಷಣಮಾಡುತ್ತಿದ್ದಾಗ ಜನರಲ್ ಡಾಯರ ನೆಂಬ ಅಧಿಕಾರಿಯು ಕೆಲವು ಹಿಂದೀ ಸೈನಿಕರೂ ಇದ್ದ ಸಶಸ್ತ್ರ ಸೇನೆ ಯೊಂದಿಗೆ ಹೋಗಿ ಗುಂಡುಹಾರಿಸಲು ಅಪ್ಪಣೆಕೊಟ್ಟನು. ಸಶಸ್ತ್ರ ಸೈನಿಕ ರಿಂದ ಸುತ್ತುವರಿಯಲ್ಪಟ್ಟ ನಿಸ್ಸಹಾಯಕ ಸ್ಥಿತಿಯಲ್ಲಿದ್ದ ಆ ಜನರಲ್ಲಿ ಕೆಲವರು ಮರಣಪಟ್ಟರು. "ಜಲಿಯನ್‌ವಾಲಾಬಾಗಿನ ಅತ್ಯಾಚಾರ" ವೆಂದು ಈ ಘಟನೆಯು ಸರ್ವವಿದಿತವಾಗಿದೆ.

೧೯೧೯ರ ಅಮೃತಸರ ಕೊಂಗ್ರೆಸ್ ಅಧಿವೇಶನವು ಪಂಡಿತ್ ಮೋತೀ ಲಾಲ ನೆಹರುರವರ ಅಧ್ಯಕ್ಷತೆಯಲ್ಲಿ ನಡೆದಾಗ, ಆ ಹತ್ಯಾಕಾಂಡವನ್ನು ಖಂಡಿಸಲಾಯಿತು. ಮೊಂಟ್-ಫೊರ್ಡ್ ಸುಧಾರಣೆಯ ವಿಷಯ ದೀರ್ಘ ಚರ್ಚೆ ನಡೆದು, ಮುಂದೆ ಜವಾಬ್ದಾರಿ ಸರಕಾರವು ಸ್ಥಾಪನೆಯಾಗಲಿದ್ದು ದರಿಂದ ಸರಕಾರದೊಡನೆ ಸಹಕರಿಸಬೇಕೆಂಬ ಗಾಂಧೀಜಿಯವರ ಧೋರಣೆಗೆ ಮನ್ನಣೆ ದೊರೆಯಿತು.

೧೯೨೦ರಲ್ಲಿ ಸಹಕಾರ ನೀತಿಗೆ ಬೆಂಬಲ ದೊರೆಯದಿದ್ದುದರಿಂದಲೂ, ಖಿಲಾಫತಿಗೆ ಆದ ಅನ್ಯಾಯದಿಂದಲೂ, ಹಿಂದೆ ನಡೆದ ಹತ್ಯಾಕಾಂಡ ದಿಂದಲೂ ಜನತೆಯಲ್ಲಿ ನಿರಾಶಾಭಾವನೆ ಮೂಡಿತ್ತು. ಮಹಾತ್ಮಾಜೀ ಯವರು ಅಸಹಕಾರವಾದಿಯಾದರು. ೧೯೨೦ರ ಅಗಸ್ಟ ೧ರಂದು ಅಸಹ ಕಾರ ಚಳವಳವನ್ನು ಪ್ರಾರಂಭಿಸಬೇಕೆಂದು ಗಾಂಧೀಜಿ ಸಂಕಲ್ಪಿಸಿದ್ದರು. ಅದರ ಮೊದಲ ಮಧ್ಯರಾತ್ರಿ ಲೋಕಮಾನ್ಯ ತಿಲಕರು ಪರಂಧಾಮವನ್ನೈದಿ ದರು. ಸ್ವಾತಂತ್ರ್ಯ ಸಂಗ್ರಾಮದ ಧೀರಸೇನಾನಿಯನ್ನು ಕಳೆದುಕೊಂಡ ಜನತೆ ಹಲುಬಿತು.

ತಿಲಕರ ನಿಧನದ ನಂತರ ಗಾಂಧೀಜಿಯವರು ಚಳವಳದ ಸರ್ವಾಧಿ ಕಾರಿಯಾದರು. ಚಳವಳವನ್ನು ಹಬ್ಬಿಸುವುದಕ್ಕೆ ಇನ್ನೂ ಕೊಂಗ್ರೆಸ್ಸಿನ ಅನುಮತಿ ದೊರೆಯದಿದ್ದುದರಿಂದ ಸಪ್ಟಂಬರ್ ೪ರಿಂದ ೯ರ ತನಕ ಲಾಲಾ ಲಜಪತರಾಯ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದ ಕಲ್ಕತ್ತಾ ಅಧಿವೇಶನ ದಲ್ಲಿ ಅವರು ತಮ್ಮ ಠರಾವನ್ನು ಮಂಡಿಸಿದರು. ಅಸಹಕಾರಕ್ಕೆ ಸಮ್ಮತಿ ದೊರೆತರೂ, ದೇಶಬಂಧು ಚಿತ್ತರಂಜನ ದಾಸರು ಅಸಹಕಾರ ವಿರೋಧಿ ಯಾಗಿದ್ದುದರಿಂದ ಅವರು ಈ ಠರಾವಿಗೆ ತಮ್ಮ ವಿರೋಧ ಸೂಚಿಸಿದರು. ಮುಂದೆ ದಿಶಂಬರದಲ್ಲಿ ನಡೆದ ನಾಗಪುರ ಅಧಿವೇಶನದಲ್ಲಿ ದಾಸರು ಮೋತೀ

ಲಾಲರೊಡಗೂಡಿ ಅಸಹಕಾರವನ್ನು ವಿರೋಧಿಸಿ ಸೋತು, ಇಬ್ಬರೂ ಮಹಾತ್ಮರ ಎಡ ಬಲ ಕೈಗಳಾಗಿ ಅಸಹಕಾರ ರಣಾಂಗಣದಲ್ಲಿ ಧುಮುಕಿದರು. ಸರಿ, ಇನ್ನು ಕೇಳಬೇಕೇ? ಅಸಹಕಾರದ ಜ್ವಾಲೆಯು ಭುಗಿಲ್ಲೆಂದು ಕಿಡಿಗಾರುತ್ತ ಸಮಗ್ರದೇಶದಲ್ಲಿ ವ್ಯಾಪಿಸಿತು.

ಅಸಹಕಾರ ಚಳವಳದ ಮುಖ್ಯ ತತ್ವಗಳಾಗಿದ್ದ ಖಾದೀ ಪ್ರಚಾರ, ಹರಿಜನೋದ್ಧಾರ, ಸ್ವದೇಶೀ ಚಳವಳ, ಪರದೇಶೀ ವಸ್ತ್ರ ಬಹಿಷ್ಕಾರ, ಸುರಾಪಾನ ನಿಷೇಧ, ನ್ಯಾಯಾಲಯ-ಸರಕಾರಿ ಕಚೇರಿ-ಶಾಲೆ-ಕಾಲೇಜು-ಇವುಗಳ ಬಹಿಷ್ಕಾರ, ಇವುಗಳನ್ನು ಜನತೆ ಉತ್ಸಾಹಪೂರ್ವಕವಾಗಿ ಆಚರಣೆಗೆ ತಂದಿತು. ಆನೇಕ ನ್ಯಾಯಾಲಯುಗಳಿಂದ ಹಲವು ವಕೀಲರು ಹೊರಗೆ ಉಳಿದರು. ದೇಶಬಂಧು ಚಿತ್ತರಂಜನ ದಾಸ್, ಪಂಡಿತ ಮೋತೀಲಾಲ ನೆಹರೂ, ಚಕ್ರವರ್ತಿ ರಾಜಗೋಪಾಲಾಚಾರ್ಯ-ಇವರೇ ಮೊದಲಾದ ಪ್ರತಿಭಾವಂತ ವಕೀಲರು ತಮಗೆ ಅಪಾರಧನವನ್ನು ತಂದು ಸುರಿಯುತ್ತಿದ್ದ ವಕೀಲಿಯನ್ನೇ ತೊರೆದರು. ಹಲವರು ಸರಕಾರೀ ನೌಕರಿಗಳಿಗೆ ಶರಣು ಹೊಡೆದರು. ಸಾವಿರಾರು ವಿದ್ಯಾರ್ಥಿಗಳು ಶಾಲೆ-ಕೊಲೇಜುಗಳನ್ನು ಬಹಿಷ್ಕರಿಸಿದರು. ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಲೋಕಮಾನ್ಯ ತಿಲಕರ ಹೆಸರಿನಲ್ಲಿ ವಿದ್ಯಾಪೀಠಗಳೂ, ರಾಷ್ಟ್ರೀಯ ವಿದ್ಯಾಲಯುಗಳೂ ಸ್ಥಾಪಿತವಾದುವು. ಪರದೇಶೀ ವಸ್ತುಗಳಿಗೆ ಬಹಿಷ್ಕಾರ ಹಾಕಲಾಯಿತು. ಹಲವರು ಸರಕಾರ ಕೊಟ್ಟ ಬಿರುದು ಬಾವಲಿಗಳನ್ನು ಬಿಟ್ಟರು. ಅನೇಕರು ದೊಡ್ಡ ಪದವಿಗಳಿಗೂ ರಾಜಿನಾಮೆಯಿತ್ತರು. ಕವಿವರ್ಯ ರವೀಂದ್ರನಾಥ ಠಾಗೂರರು ತಮ್ಮ 'ಸರ್' ಬಿರುದಿಗೆ ರಾಜಿನಾಮೆಯಿತ್ತರು. ಐ. ಸಿ. ಎಸ್. ಪದವೀಧರರಾಗಿ ಮಾತೃಭೂಮಿಗೆ ಮರಳಿದ್ದ ಸುಭಾಸರು ತಮ್ಮ ಪದವಿಗೆ ತಿಲಾಂಜಲಿಯಿತ್ತರು. ಸರಕಾರವು ದಬ್ಬಾಳಿಕೆಯನ್ನು ಹೆಚ್ಚಿಸಿತು. ನಿರಪರಾಧಿ ಸತ್ಯಾಗ್ರಹಿಗಳು ಹಲವರು ನಿರ್ದಯಿ ಸರಕಾರದ ಗುಂಡಿನೇಟಿಗೆ ಬಲಿಯಾದರು. ಗಾಂಧೀಜಿಯವರ ಸಹಕಾರಿಗಳಾಗಿದ್ದ ಆಲಿ ಸಹೋದರರು ಬಂಧಿತರಾದರು.

ಇದೇ ವೇಳೆಯಲ್ಲಿ ಭಾರತಕ್ಕೆ ಬಂದ ಇಂಗ್ಲೆಂಡಿನ ಯುವರಾಜನಿಗೆ ಜನತೆ ಬಹಿಷ್ಕಾರ ಹಾಕಿತು. ದೊಡ್ಡ ಗಲಭೆಯೇ ನಡೆಯಿತು. ಹಲವರು ಪ್ರಾಣಗಳನ್ನು ನೀಗಿದರು. ಹಲವರ ಬಂಧನವಾಯಿತು. ಯುವರಾಜನ

ಆಗಮನದ ಬಹಿಷ್ಕಾರದೊಂದಿಗೆ ಚೌರಿಚೌರಾ ಎಂಬಲ್ಲಿ ಜನರು ದಂಗೆಯೆದ್ದು ಪೋಲೀಸರನ್ನು ವಧಿಸಿದುದರಿಂದ ಗಾಂಧೀಜಿ ನೊಂದು, ಉಪವಾಸ ವ್ರತ ಕೈಕೊಂಡರು. ಇಷ್ಟೆಲ್ಲ ಗಲಭೆಗೆ ಗಾಂಧೀಜಿಯವರೇ ಕಾರಣರೆಂದು, ಸರಕಾರವು ಅಹಮ್ಮದಾಬಾದಿನಲ್ಲಿ ವಿಚಾರಣೆ ನಡೆಸಿ, ಅವರನ್ನು ರಾಜದ್ರೋಹಿಯೆಂದು ಆಪಾದಿಸಿ, ಆರು ವರ್ಷಗಳ ಶಿಕ್ಷೆ ವಿಧಿಸಿತು.

ಅವರ ಬಂಧನದ ಸಮಯದಲ್ಲಿ ಕೊಂಗ್ರೆಸ್ಸಿನಲ್ಲಿ ಇಬ್ಬಣಗಳುಂಟಾದುವು. ಶಾಸನಸಭಾ ಪ್ರವೇಶ ಮಾಡಿ ಅಲ್ಲಿಂದ ಸರಕಾರದೊಡನೆ ಹೋರಾಡಬೇಕೆನ್ನುವ ಪಕ್ಷವೊಂದು, ಶಾಸನಸಭಾ ಪ್ರವೇಶವನ್ನೇ ಬಹಿಷ್ಕರಿಸಬೇಕೆನ್ನುವ ಪಕ್ಷವಿನ್ನೊಂದು. ಮೊದಲನೆಯದರ ಮುಖಂಡರು ದೇಶಬಂಧು ದಾಸ ಮತ್ತು ಮೋತೀಲಾಲ ನೆಹರೂರವರು. ಎರಡನೆಯ ಪಕ್ಷದ ಮುಂದಾಳುಗಳು ಚಕ್ರವರ್ತಿ ರಾಜಗೋಪಾಲಾಚಾರ್ಯ ಮತ್ತು ಡಾ। ರಾಜೇಂದ್ರ ಪ್ರಸಾದರು. ಅಖಿಲ ಭಾರತ ಕೊಂಗ್ರೆಸ್ಸಿನ ಸಭೆಯೊಂದರಲ್ಲಿ ಮೊದಲನೆಯ ಪಕ್ಷದ ಮುಖಂಡರು ತಮ್ಮ ವರದಿಗಳನ್ನು ಮಂಡಿಸಿದಾಗ ಅವು ಅಸ್ವೀಕೃತವಾದುವು. ಮುಂದೆ ೧೯೨೨ರ ಗಯಾ ಅಧಿವೇಶನದಲ್ಲಿ ಅಧ್ಯಕ್ಷಪೀಠದಿಂದ ದೇಶಬಂಧುಗಳು ತಮ್ಮ ಧೋರಣೆಯನ್ನು ಸಮರ್ಥಿಸಿದರೂ ಅದಕ್ಕೆ ಸಾಕಷ್ಟು ಬೆಂಬಲ ದೊರೆಯದೆ, ಬಹಿಷ್ಕಾರವೇ ಮೇಲಾದುದರಿಂದ ದಾಸರು ಅಧ್ಯಕ್ಷ ಪಟ್ಟಕ್ಕೆ ಶರಣುಹೊಡೆದು, ಮೋತಿಲಾಲರೊಂದಿಗೆ 'ಸ್ವರಾಜ್ಯ ಪಕ್ಷ'ವನ್ನು ಸ್ಥಾಪಿಸಿದರು. ೧೯೨೩ನೆಯ ದಿಲ್ಲಿಯ ಅಧಿವೇಶನದಲ್ಲಿ ಶಾಸನಸಭಾ ಪ್ರವೇಶಕ್ಕೆ ಸಮ್ಮತಿ ದೊರೆಯಿತು. ತನ್ಮಧ್ಯೆ ಆರು ವರ್ಷಗಳ ಶಿಕ್ಷಾವಿಧಿತರಾಗಿದ್ದ ಗಾಂಧೀಜಿಯವರು ಅಸ್ವಸ್ಥರಾದುದರಿಂದ ೧೯೨೪ರ ಫೆಬ್ರವರಿಯಲ್ಲಿ ಬಿಡುಗಡೆಗೊಳಿಸಲ್ಪಟ್ಟರು. ಆ ವರ್ಷದ ಬೆಳಗಾವಿ ಅಧಿವೇಶನಕ್ಕೆ ಅವರೇ ಅಧ್ಯಕ್ಷರಾಗಿ ಚುನಾಯಿತರಾದರು. ಈ ಅಧಿವೇಶನದಲ್ಲಿ ಶಾಸನಸಭಾ ಪ್ರವೇಶಕ್ಕೆ ಅನುಮತಿ ದೊರೆಯಿತಲ್ಲದೇ ಸ್ವರಾಜ್ಯ ಪಕ್ಷವು ಕೊಂಗ್ರೆಸ್ಸಿನಲ್ಲಿಯೇ ಲೀನವಾಯಿತು. ಮರುವರ್ಷ (೧೯೨೫) ದುರ್ದೈವವಶಾತ್ ದೇಶಬಂಧುಗಳು ಅಕಾಲನಿಧನಕ್ಕೆ ತುತ್ತಾದರು.

೧೯೨೭ರಲ್ಲಿ ಡಾ। ಮುಖ್ತಾರ ಅಹಮ್ಮದ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಮದ್ರಾಸ್ ಅಧಿವೇಶನದಲ್ಲಿ, ಭಾರತಕ್ಕೆ ಸಂಪೂರ್ಣ ಸ್ವರಾಜ್ಯ ದೊರೆಯಬೇಕೆಂದೂ, ದೇಶಕ್ಕೆ ಹೊಸ ಸುಧಾರಣೆಗಳನ್ನು ಕೊಡಲು ಬರುವ

ಸೈಮನ್ ಸಮಿತಿಯನ್ನು ಬಹಿಷ್ಕರಿಸಬೇಕೆಂದೂ ನಿರ್ಣಯವಾಯಿತು. ಸೈಮನ್ ಸಮಿತಿಯು ಭಾರತಕ್ಕೆ ಬಂದಾಗ ಇಡೀ ರಾಷ್ಟ್ರವೇ ಅದನ್ನು ಬಹಿಷ್ಕರಿಸಿತು. ೧೪೪ ಕಲಮನ್ನು ಉಲ್ಲಂಘಿಸಿ ಕೆಲವೆಡೆಗಳಲ್ಲಿ ಮೆರವಣಿಗೆಗಳಾದುವು. 'ಪಂಜಾಬದ ಕೇಸರಿ' ಲಾಲಾ ಲಜಪತ್ ರಾಯ್‌ರವರು ಈ ಸಮಯದಲ್ಲಿ ಪೋಲೀಸರ ಲಾಠೀ ಪ್ರಹಾರಕ್ಕೆ ತುತ್ತಾಗಿ ರಾಷ್ಟ್ರಕ್ಕಾಗಿ ಆತ್ಮ ಬಲಿದಾನ ಗೈದು, ಅಮರರಾದರು. ಅದೇ ವರ್ಷ ಬಾರ್ದೋಲಿಯಲ್ಲಿ ಸರದಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಸತ್ಯಾಗ್ರಹವು ನಡೆದು ಯಶಸ್ವೀ ಮುಕ್ತಾಯವಾಯಿತು.

೧೯೨೮ರ ಕಲ್ಕತ್ತಾ ಅಧಿವೇಶನಕ್ಕೆ ಪಂಡಿತ ಮೋತಿಲಾಲರು ಅಧ್ಯಕ್ಷರಾಗಿದ್ದರು. ಈ ಅಧಿವೇಶನದಲ್ಲಿ ೧೯೨೯ರ ದಶಂಬರ ೩೧ರೊಳಗೆ ಭಾರತಕ್ಕೆ ಸಾಮಂತ ಸ್ವರಾಜ್ಯವು ದೊರೆಯದಿದ್ದಲ್ಲಿ ಕೊಂಗ್ರೆಸ್ಸು ಇನ್ನೊಮ್ಮೆ ಅಸಹಕಾರ ಆಂದೋಲನವನ್ನಾರಂಭಿಸುವುದೆಂದು ಸರಕಾರಕ್ಕೆ ತಿಳಿಸಲಾಯಿತು. ೧೯೨೯ರ ದಶಂಬರ ೩೧ರಂದು ಪಂಡಿತ ಜವಾಹರಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆದ ಲಾಹೋರು ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯತ ಠರಾವು ಮಂಜೂರಾಗಿ, ಸವಿನಯ ಶಾಸನ ಭಂಗ ಚಳವಳದ ಕಾರ್ಯಕ್ರಮವೂ ಸ್ವೀಕೃತವಾಯಿತು. ೧೯೩೦ರ ಜನವರಿ ೨೬ರಂದು ಸ್ವಾತಂತ್ರ್ಯ ದಿನಾಚರಣೆ ಮಾಡಬೇಕೆಂದೂ ಘೋಷಿಸಲಾಯಿತು. ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ದಿನಾಚರಣೆಯು ಸಂಭ್ರಮದಿಂದ ಆಚರಿಸಲ್ಪಟ್ಟಿತು. ಸಾಮೂಹಿಕ ಶಾಸನ ಭಂಗಕ್ಕೆ ಕೊಂಗ್ರೆಸ್ಸು ಮಹಾತ್ಮರಿಗೆ ಅನುಮತಿಯನ್ನಿತ್ತಿತು. ಉಪ್ಪಿನ ಕರನಿರಾಕರಣೆಯನ್ನು ಶಾಸನ ಭಂಗದ ಮುಖ್ಯೋದ್ದೇಶವನ್ನಾಗಿ ಇರಿಸಿಕೊಳ್ಳಲಾಯಿತು. ಅದರ ಮೊದಲು ವೈಸರೋಯಿ ಲಾರ್ಡ್ ಇರ್ವಿನ್ನರಿಗೆ ಗಾಂಧೀಜಿಯವರು ಸಾಬರ್ಮತಿ ಆಶ್ರಮದಿಂದ ತಮ್ಮ ಕಾರ್ಯಕ್ರಮಗಳನ್ನು ವಿವರಿಸಿ, ಸತ್ಯಾಗ್ರಹವನ್ನು ನಿಲ್ಲಿಸಬೇಕಾದಲ್ಲಿ ರಾಷ್ಟ್ರದ ೧೧ ಬೇಡಿಕೆಗಳನ್ನು ಪೂರೈಸಬೇಕೆಂದು ಪತ್ರಮುಖೇನ ತಿಳಿಸಿದ್ದರು. ಅವು ತಿರಸ್ಕೃತವಾದುದರಿಂದ ಮಹಾತ್ಮಾಜಿಯವರು ಸತ್ಯಾಗ್ರಹ ಸಿದ್ಧತೆಗಳನ್ನು ನಡೆಸಿದರು. ಆಶ್ರಮದ ೭೮ ಮಂದಿ ಶಿಷ್ಯರೊಡನೆ ಸಾಬರ್ಮತಿಯಿಂದ ೨೦೦ ಮೈಲು ದೂರವಿರುವ ಕಡಲದಡದ ದಂಡೀ ಗ್ರಾಮಕ್ಕೆ ಕಾಲ್ನಡಿಗೆಯಿಂದ ೧೯೩೦ರ ಮಾರ್ಚ್ ೧೨ರಂದು ಹೊರಟು, ೨೪ ದಿನಗಳ ನಂತರ

ಗ್ರಾಮವನ್ನು ತಲುಪಿ, ಅಲ್ಲಿ ಶಾಸನಕ್ಕೆ ವಿರುದ್ಧವಾಗಿ ಉಪ್ಪಿನ ತಯಾರಿ ಮಾಡಲಾರಂಭಿಸಿದರು. ಈ ಚಳವಳವು ದೇಶದಾದ್ಯಂತ ನಡೆಯಿತು. ಇದು ಉಪ್ಪಿನ ಸತ್ಯಾಗ್ರಹವೆಂದು ಇತಿಹಾಸದಲ್ಲಿ ದಾಖಲಾಗಿದೆ. ಈ ಕಾರ್ಯಕ್ರಮವು ಭಾರತದಲ್ಲಿ ನವಚೈತನ್ಯವನ್ನೇ ತಂದೊಡ್ಡಿತು. ಸರಕಾರವು ದಬ್ಬಾಳಿಕೆಯನ್ನಾರಂಭಿಸಿತು. ಸರಕಾರದ ಗುಂಡುಗಳಿಗೆ ನಿರಪರಾಧಿ ಸತ್ಯಾಗ್ರಹಿಗಳು ಬಲಿಯಾದರು. ದೇಶದಲ್ಲಿ ರಕ್ತದ ಕಾಲುವೆಯೇ ಹರಿಯಿತು. ಸುಮಾರು ೬೦,೦೦೦ ಮಂದಿ ಬಂಧಿತರಾದರು. ಮೇ ೫ರಂದು ಧರಸಾನಾ ಉಪ್ಪಿನ ಕೋಟೆಯ ಮೇಲೆ ದಾಳಿನಡೆಸಲು ಹೋದಾಗ ಗುಪ್ತವಾಗಿ ಗಾಂಧೀಜಿಯವರನ್ನು ಬಂಧಿಸಿ, ಯರವಾಡಾ ಕಾರಾಗೃಹಕ್ಕೊಯ್ದರು. ಚಳವಳವು ಇನ್ನಷ್ಟು ಉಗ್ರವಾಯಿತು. ಸರೋಜಿನಿ ನಾಯ್ಡುರವರು ಚಳವಳದ ಸರ್ವಾಧಿಕಾರಿಯಾದರು.

ಸತ್ಯಾಗ್ರಹವನ್ನು ನಿಲ್ಲಿಸಿದಲ್ಲಿ ಕೊಂಗ್ರೆಸ್ಸಿಗೆ ಲಂಡನಿನಲ್ಲಿ ನಡೆಯಲಿದ್ದ ಚಕ್ರಗೋಷ್ಠಿ (Round Table Conference)ಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದೆಂದು ಘೋಷಣೆಯಾಯಿತು. ಸಪ್ರು ಮತ್ತು ಡಾ| ಜಯಕರ—ಇವರ ಯತ್ನದಿಂದ ಮೋತೀಲಾಲರನ್ನು ಜವಾಹರಲಾಲರೊಂದಿಗೆ ನೈನಿತಾಲದಿಂದ ಯರವಾಡಕ್ಕೆ ಕರೆತಂದು ಗಾಂಧೀಜಿಯವರ ಭೇಟಿಮಾಡಿಸಿದರು. ಮಾತುಕತೆ ನಡೆದು ಕೊನೆಗೆ ನಿಷ್ಫಲವಾಯಿತು. ೧೯೩೦ರ ನವೆಂಬರ ೧೨ಕ್ಕೆ ಪರಿಷತ್ತು ಪ್ರಾರಂಭವಾಗಿ ೧೯೩೧ರ ಜನವರಿ ೧೯ರ ತನಕ ನಡೆಯಿತು. ಬ್ರಿಟನ್ನಿನ ಪ್ರಧಾನಿಯಾಗಿದ್ದ ರೆಮ್ಸೇ ಮೆಕ್ಡೊನಾಲ್ಡರು ಭಾರತದಲ್ಲಿ ಆಂದೋಲನವನ್ನು ನಿಲ್ಲಿಸಿದಲ್ಲಿ ಭಾರತೀಯ ರಾಜ್ಯಾಂಗ ರಚನೆಯಲ್ಲಿ ಬ್ರಿಟನ್ನು ತನ್ನ ಬೆಂಬಲ ನೀಡುವುದೆಂದು ಹೊರಡಿಸಿದ ಘೋಷಣೆಯನ್ವಯ ಮಹಾತ್ಮಾ ಗಾಂಧಿ ಮತ್ತು ೨೬ ಮಂದಿ ಧುರೀಣರನ್ನು ಬಂಧವಿಮುಕ್ತಗೊಳಿಸಿದರು.

ಅದೇ ತಿಂಗಳಲ್ಲಿ ಮೋತೀಲಾಲರು ಪರಂಧಾಮವನ್ನೈದಿದರು.

ಮಾರ್ಚ್ ೫ರಂದು ನಡೆದ ವೈಸರೋಯಿ ಇರ್ವಿನ್—ಗಾಂಧಿ ಒಪ್ಪಂದದಂತೆ, ಲಂಡನಿನಲ್ಲಿ ನಡೆಯಲಿದ್ದ ದ್ವಿತೀಯ ಚಕ್ರಗೋಷ್ಠಿಯಲ್ಲಿ ಭಾಗಿಯಾಗಲು ಕೊಂಗ್ರೆಸ್ಸು ಒಪ್ಪಿಕೊಂಡಿತು. ಸತ್ಯಾಗ್ರಹಿಗಳು ಬಿಡುಗಡೆ ಹೊಂದಿದರು. ಲಾಹೋರಿನ ಕ್ರಾಂತಿಯ ಮೊಕದ್ದಮೆಯ ಜಾಲದಲ್ಲಿ

ಸಿಕ್ಕಿಬಿದ್ದ ಭಗತಸಿಂಗ್, ದತ್ ಮತ್ತು ರಾಜಗುರು ಮೊದಲಾದ ದೇಶಾಭಿಮಾನಿಗಳ ರಕ್ಷಣೆಯಲ್ಲಿ ಕಾಂಗ್ರೆಸ್ಸು ವಿಫಲಹೊಂದಿತು. ಅವರನ್ನು ಸರಕಾರವು ಗಲ್ಲಿಗೇರಿಸಿತು.

೧೯೩೧ರ ಕರಾಚಿ ಕಾಂಗ್ರೆಸ್ಸು ಅಧಿವೇಶನವು ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಸೇರಿತು. ಗಾಂಧಿ—ಇರ್ವಿನ್ ಒಪ್ಪಂದಕ್ಕೆ ಈ ಅಧಿವೇಶನದಲ್ಲಿ ಮನ್ನಣೆಯನ್ನೀಯಲಾಯಿತು. ಸಮ್ಮ ಮೂಲಭೂತ ಹಕ್ಕುಗಳ ನಿರ್ಣಯವನ್ನೂ ಮಾಡಲಾಯಿತು. ಗಾಂಧೀಜಿಯವರು ಕಾಂಗ್ರೆಸ್ಸಿನ ಏಕಮಾತ್ರ ಪ್ರತಿನಿಧಿಯಾಗಿ ಚಕ್ರಗೋಷ್ಠಿಯಲ್ಲಿ ಭಾಗವಹಿಸಲು ಲಂಡನಿಗೆ ತೆರಳಬೇಕೆಂದು ನಿರ್ಧರಿಸಲಾಯಿತು. ವೈಸರಾಯಿ ಇರ್ವಿನ್ನರ ಅಧಿಕಾರಾವಧಿಯು ಕೊನೆಗೊಂಡು ಲಾರ್ಡ್ ವಿಲ್ಲಿಂಗ್ಡನರು ಬಂದಿದ್ದರು. ಅಗಸ್ಟ ೨೯ರಂದು ಗಾಂಧೀಜಿ ಲಂಡನಿಗೆ ತೆರಳಿದರು. ಅಲ್ಲಿ ಅವರ ಪ್ರಯತ್ನವು ವಿಫಲವಾಯಿತು. ದಶಂಬರದಲ್ಲಿ ಅವರು ಭಾರತಕ್ಕೆ ಮರಳಿದಾಗ, ಒಪ್ಪಂದಕ್ಕೆ ವಿರುದ್ಧವಾಗಿ ದೇಶದಲ್ಲಿ ದಬ್ಬಾಳಿಕೆ ನಡೆಯುತ್ತಿದ್ದುದರಿಂದ ಅಲ್ಲಲ್ಲಿ ದಬ್ಬಾಳಿಕೆಗೆ ವಿರುದ್ಧವಾಗಿ ಚಳವಳಗಳು ನಡೆಯುತ್ತಿದ್ದುವು; ಸರಕಾರವು ಸತ್ಯಾಗ್ರಹಿಗಳನ್ನು ಸೆರೆಮನೆಗಳಲ್ಲಿ ಸೇರಿಸುತ್ತಿತ್ತು. ಅನೇಕ ಧುರೀಣರು ಬಂಧಿತರಾಗಿದ್ದರು. ಗಾಂಧೀಜಿಯವರು ಮುಂಬಯಿಯಲ್ಲಿಳಿದು ಪ್ರಚಂಡ ಜನಸ್ತೋಮವನ್ನುದ್ದೇಶಿಸಿ ಸಂಯುಕ್ತ ಮತದಾನ ಪದ್ಧತಿಗೆ ಸರಕಾರವು ಮನ್ನಣೆಯನ್ನೀಯದಿದ್ದಲ್ಲಿ, ಅದನ್ನು ವಿರೋಧಿಸಿ ತನ್ನ ಜೀವದ ಹಂಗು ತೊರೆದು ಹೋರಾಡಲು ಸಿದ್ಧನಿರುವೆನೆಂದು ಸಾರಿದರು. ಗಾಂಧೀಜಿಯವರು ಅಪೇಕ್ಷಿಸಿದ ಭೇಟಿಯನ್ನು ವೈಸರೋಯಿಯವರು ನಿರಾಕರಿಸಿದರು. ಮಹಾತ್ಮರೊಂದಿಗೆ ಸರದಾರರನ್ನೂ, ಇನ್ನಿತರ ಮುಖಂಡರನ್ನೂ ಬಂಧಿಸಲಾಯಿತು. ರಾಷ್ಟ್ರವು ಪುನಃ ಶಾಸನಭಂಗ ಚಳವಳವನ್ನಾರಂಭಿಸಿತು. ಹಲವರು ಕಾರಾಗ್ರಹಗಳಿಗೆ ಸೆಳೆಯಲ್ಪಟ್ಟರು; ಲಾಠಿ, ಗುಂಡುಗಳಿಗೆ ಹಲವರು ಬಲಿಯಾದರು.

ಹಿಂದೆ ಘೋಷಿಸಿದಂತೆ ಹರಿಜನರಿಗೆ ಪ್ರತ್ಯೇಕ ಮತದಾರ ಸಂಘಗಳನ್ನೇರ್ಪಡಿಸಲು ಸರಕಾರವು ಪ್ರಯತ್ನ ನಡೆಸಿತ್ತು. ಸಂಯುಕ್ತ ಮತದಾನ ಪದ್ಧತಿಯನ್ನು ಜಾರಿಗೆ ತಾರದಿದ್ದಲ್ಲಿ ತಾನು ತನ್ನ ಜೀವನವನ್ನೆ ಪಣವಾಗಿಟ್ಟು ಹೋರಾಡುವುದಾಗಿ ಗಾಂಧೀಜಿಯವರು ಭಾರತ ಮಂತ್ರಿಗೆ ತಿಳಿಸಿ

ದರು. ಸರಕಾರವು ಇದಕ್ಕೆ ಲಕ್ಷ್ಯಕೊಡದೇ ತನ್ನ ನಿರ್ಣಯವನ್ನು ಅಗಸ್ಟ್ ೧೯೩೨ರಲ್ಲಿ ಪ್ರಕಟಿಸಿತು. ಗಾಂಧೀಜಿಯವರು ಇದನ್ನು ವಿರೋಧಿಸಿ ಆಮರಣ ಉಪವಾಸವನ್ನಾರಂಭಿಸಿದರು. ಸರಕಾರ ಮಣಿಯಿತು. ಸಂಯುಕ್ತ ಮತದಾರ ಸಂಘಗಳನ್ನೇರ್ಪಡಿಸಲು ಒಪ್ಪಿತು; ಹರಿಜನರಿಗೆ ಹೆಚ್ಚೆಚ್ಚು ಪ್ರಾತಿನಿಧ್ಯ ದೊರಕುವಂತೆಯೂ ಮಾಡಿತು.

ಮಹಾತ್ಮರು ೧೯೩೩ರಲ್ಲಿ ಸಾಮೂಹಿಕ ಸತ್ಯಾಗ್ರಹವನ್ನು ನಿಲ್ಲಿಸಿ, ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿದುದರಿಂದ ಅಗಸ್ಟ್ ೧ರಂದು ಅವರೊಡನೆ ಸಾಬರ್ಮತಿ ಆಶ್ರಮದ ಹಲವರು ಶಿಷ್ಯರನ್ನು ಬಂಧಿಸಿ, ನಾಲ್ಕು ದಿನಗಳ ನಂತರ ಅವರನ್ನು ಬಿಡುಗಡೆಗೊಳಿಸಲಾಯಿತು. ಆದರೆ, ಅವರು ಪುಣೆಯಲ್ಲೇ ಇರಬೇಕೆಂದು ನಿರ್ಬಂಧಕಾಜ್ಞೆಯನ್ನು ಹೊರಿಸಲಾಯಿತು. ಇದನ್ನು ವಿರೋಧಿಸಿ ಜನತೆ ಆಂದೋಲನ ಹೂಡಿತು. ಸೆರೆಮನೆಯಲ್ಲಿ ಮಹಾತ್ಮರು ಉಪವಾಸವನ್ನಾರಂಭಿಸಿದರು. ದೇಹವು ಕೃಶವಾಗುತ್ತ ಬಂದಿತು. ಅವರು ಚಿಂತಾಜನಕ ಸ್ಥಿತಿಯಲ್ಲಿದ್ದಾಗ ಬಿಡುಗಡೆಗೊಳಿಸಲ್ಪಟ್ಟರು. ೧೯೩೪ರ ಎಪ್ರಿಲ್‌ನಲ್ಲಿ ಸತ್ಯಾಗ್ರಹ ನಿಂತಿತು.

೧೯೩೫ರ ಇಂಡಿಯಾ ಆಕ್ಟ್ ಮೇರೆಗೆ ೧೯೩೭ರ ಫೆಬ್ರವರಿಯಲ್ಲಿ ಚುನಾವಣೆ ನಡೆದು, ಕೊಂಗ್ರೆಸ್ಸು ವಿಜಯಿಯಾಗಿ ಪ್ರಾಂತ್ಯಗಳಲ್ಲಿ ಸರಕಾರ ಸ್ಥಾಪಿಸಿತು. ಮುಂಬಯಿ, ಮದ್ರಾಸು, ಒಡಿಸಾ, ಮಧ್ಯಪ್ರಾಂತ್ಯ, ಅಸಾಮ್, ಬಿಹಾರ್, ಸಂಯುಕ್ತ ಪ್ರಾಂತ್ಯ (ಈಗಿನ ಉತ್ತರ ಪ್ರದೇಶ), ಗಡಿನಾಡು—ಈ ಎಂಟು ಪ್ರಾಂತ್ಯಗಳಲ್ಲಿ ಕೊಂಗ್ರೆಸ್ ಮಂತ್ರಿಮಂಡಲಗಳು ರಚನೆಯಾದುವು. ಹಿಂದೆ ಕರಾಚಿಯಲ್ಲಿ ಸಾರಿದ್ದ ನಮ್ಮ ಮೂಲಭೂತ ಹಕ್ಕುಗಳ ಶಾಸನದ ಪ್ರಕಾರ ಪ್ರಾಂತ್ಯಗಳಲ್ಲಿ ಆಡಳಿತೆ ನಡೆಯಿತು. ಪ್ರಾಂತಿಕ ಸ್ವಾಯತ್ತೆ ದೊರೆಯಿತು. ಸುರಾಪಾನಕ್ಕೆ ಪ್ರತಿಬಂಧ ಹಾಕಲಾಯಿತು. ಕೃಷಿಕರಿಗೆ ತುಂಬಾ ಸಹಾಯ ದೊರಕಿಸಲಾಯಿತು. ಹೀಗೆ ಈ ಪ್ರಾಂತಿಕ ಸರಕಾರಗಳು ಅಲ್ಪ ಕಾಲದಲ್ಲಿಯೇ ಜನಪ್ರೀತವಾದುವು.

೧೯೩೯ರಲ್ಲಿ ದ್ವಿತೀಯ ಜಾಗತಿಕ ಯುದ್ಧಾರಂಭವಾಯಿತು. ಆಂಗ್ಲ ಸರಕಾರವು ಭಾರತದೊಡನೆ ವಿಚಾರವಿನಿಮಯ ನಡೆಸದೇ ಭಾರತವೂ ಈ ಯುದ್ಧದಲ್ಲಿ ಸಹಭಾಗಿಯಾಗಿದೆಯೆಂದು ಸಾರಿದುದರಿಂದ ಪ್ರಾಂತ್ಯಗಳಲ್ಲಿ ಸರಕಾರ ಸ್ಥಾಪಿಸಿದ್ದ ಕೊಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ

ಯಿತ್ತು. ವಾಕ್ಸ್ವಾತಂತ್ರ್ಯಕ್ಕೆ ನಿರ್ಬಂಧವಿದ್ದುದರಿಂದ ಗಾಂಧೀಜಿ ೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಿ, ೧೯೪೧ರಲ್ಲಿ ಕೊನೆಗೊಳಿಸಿದರು. ೧೯೪೦ರಲ್ಲಿ ಮೌಲಾನಾ ಅಝಾದರು ರಾಷ್ಟ್ರಪತಿಯಾದರು. ರಾಮಘರ ಅಧಿವೇಶನದಲ್ಲಿ ಆಂಗ್ಲರ ಯುದ್ಧನೀತಿಯನ್ನು ಖಂಡಿಸಿ, ಭಾರತಕ್ಕೆ ಪೂರ್ಣ ಸ್ವರಾಜ್ಯ ದೊರೆಯಬೇಕೆಂದು ಸಾರಲಾಯಿತು.

ಜಪಾನು ಭಾರತವನ್ನು ಆಕ್ರಮಣಮಾಡುವುದರಲ್ಲಿತ್ತು. ೧೯೪೨ರಲ್ಲಿ ಬ್ರಿಟನಿನ ಪ್ರಧಾನಿಯಾಗಿದ್ದ ಸರ್ ವಿನ್ಸ್ಟನ್ ಚರ್ಚಿಲ್‌ರವರು ಭಾರತದ ರಾಜಕೀಯ ಸಮಸ್ಯೆಗಳನ್ನು ನೀಗಿಸುವ ಬಗ್ಗೆ ಸರ್ ಸ್ಟೈಫೊರ್ಡ್ ಕ್ರಿಪ್ಸ್ ಎಂಬವರನ್ನು ಭಾರತಕ್ಕೆ ಕಳುಹಿಸಿದರು. ಅವರು ನಮ್ಮ ದೇಶಕ್ಕೆ ಬಂದು ಧುರೀಣರೊಡನೆ ರಾಜಕೀಯ ಪರಿಸ್ಥಿತಿಯ ವಿಚಾರವಿನಿಮಯ ನಡೆಸಿದರು. ಯುದ್ಧಾನಂತರ ಭಾರತೀಯ ಒಕ್ಕೂಟವನ್ನು ರಚಿಸುವುದರಲ್ಲಿ ಇಂಗ್ಲೆಂಡು ಸಹಾಯ ನೀಡುವುದೆಂದೂ, ತಾತ್ಕಾಲಿಕ ಸರಕಾರದಲ್ಲಿ ಎಲ್ಲಾ ಪಕ್ಷದವರು ಒಂದುಗೂಡಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೂ ಘೋಷಣೆ ಹೊರಡಿಸಿದರು. ಕ್ರಿಪ್ಸರ ಯೋಜನೆಯನ್ನು ಕೊಂಗ್ರೆಸ್ಸೂ, ಮುಸ್ಲಿಂ ಲೀಗೂ ಅಂಗೀಕರಿಸಲಿಲ್ಲ.

ತನ್ಮಧ್ಯೆ ೧೯೩೯ರಲ್ಲಿ ಗಾಂಧಿ ಹಾಗೂ ಸುಭಾಷಚಂದ್ರ ಬೋಸರ ಪಕ್ಷಗಳೊಳಗೆ ತಿಕ್ಕಾಟವಾಯಿತು. ಬ್ರಿಟಿಷರೊಡನೆ ಯಾವ ತರದ ಸಂಧಾನವೂ ಕೂಡದೆಂದು ಸುಭಾಷರ ನಿಶ್ಚಿತಾಭಿಪ್ರಾಯವಿತ್ತು. ಕೊಂಗ್ರೆಸ್ಸಿನ ಅಧ್ಯಕ್ಷ ಪಟ್ಟವನ್ನು ತ್ಯಜಿಸಿ ಸುಭಾಷರು ಫಾರ್ವರ್ಡ್ ಬ್ಲಾಕ್ (Forward Block)ನ್ನು ಸ್ಥಾಪಿಸಿದರು. ಸುಭಾಷರು ಕೊಂಗ್ರೆಸ್ ಸಮಿತಿಯ ಠರಾವುವೊಂದರ ವಿರುದ್ಧ ಚಳವಳ ನಡೆಸಿದರು. ಕೊಂಗ್ರೆಸ್ಸು ಸಮಿತಿಯು ಅವರ ಮೇಲೆ ಮೂರು ವರ್ಷಗಳ ಅವಧಿಯ ಶಿಸ್ತು ಜ್ಯಾರಿ ಮಾಡಿತು. ವೈಯಕ್ತಿಕ ಸತ್ಯಾಗ್ರಹ ನಡೆಯುತ್ತಿದ್ದಾಗ ಸುಭಾಷರು ತಮ್ಮ ಮನೆಯಲ್ಲೆ ಬಂಧಿತರಾಗಿದ್ದರು. ಒಂದು ದಿನ ಸೆರೆಯಿಂದ, ಉಪಾಯದಿಂದ ಪಾರಾದರು. 'ಝಿಯಾವುದ್ದೀನ'ನೆಂಬ ಹೆಸರನ್ನಿಟ್ಟುಕೊಂಡು ಪಠಾನ ವೇಷಧಾರಿಯಾಗಿ ಕಾಬೂಲಿಗೆ ಹೋಗಿ, ಅಲ್ಲಿಂದ ಮುಂದೆ ಇಟಲಿಗೆ ತೆರಳಿ, ಅಲ್ಲಿನ ಸರ್ವಾಧಿಕಾರಿ ಬೆನಿಟೋ ಮುಸ್ಸೊಲಿನಿಯನ್ನು ಸಂದರ್ಶಿಸಿದರು. ಜರ್ಮನಿಗೆ ತೆರಳಿ, ಸರ್ವಾಧಿಕಾರಿ ಹಿಟ್ಲರನೊಡನೆ ಸಖ್ಯ ಬೆಳೆಸಿ, ಮಾತೃ

ಭೂಮಿಯ ವಿಮೋಚನಾರ್ಥ ಅಝಾದ್ ಹಿಂದ್ ಫೌಝನ್ನು ಅವನ ಸಹಾಯದಿಂದ ಸ್ಥಾಪಿಸಲಾರಂಭಿಸಿ, ಕಾರ್ಯಪ್ರವೃತ್ತರಾದರು.

ಪೂರ್ವ ಏಸ್ಯದಲ್ಲಿ ಜಪಾನರು ಮುಂದೊತ್ತಿ ಸಿಂಗಾಪುರವನ್ನು ವಶಪಡಿಸಿಕೊಂಡರು. ಜಪಾನಿನಲ್ಲಿ ಜಪಾನರ ಸಹಾಯದಿಂದ ಕ್ಯಾಪ್ಟನ್ ಮೋಹನ್ ಸಿಂಗರ ಮುಂದಾಳ್ತನದಲ್ಲಿ ಅಝಾದ್ ಹಿಂದ್ ಫೌಝು ರಚನೆಯಾಯಿತು. ಫೌಝಿನಲ್ಲಿ ಸುಮಾರು ೨೦,೦೦೦ಕ್ಕೂ ಮಿಕ್ಕಿ ಯೋಧರಿದ್ದರು. ಸುಭಾಸರು 'ಜಲಾಂತರ್ಗಾಮಿಯ ಮೂಲಕ ಟೋಕಿಯೋಗೆ ತೆರಳಿ, ೧೯೪೩ನೆಯ ಜುಲೈ ೨ರಂದು ಸಿಂಗಾಪುರಕ್ಕೆ ಬಂದರು. ಜುಲೈ ೫ರಂದು ಸುಭಾಸರ ನೇತೃತ್ವದಲ್ಲಿ ಅಝಾದ್ ಹಿಂದ್ ಸರಕಾರವು ರಚಿತವಾಯಿತು. ಸುಭಾಸರು 'ನೇತಾಜೀ'ಯಾದರು. ಸುಭಾಸರ ಅಝಾದ್ ಹಿಂದ್ ಸೇನಾಚರಿತ್ರವು ಅದ್ಭುತರಮ್ಯವಾಗಿದೆ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಅನುಕೂಲ ವಾತಾವರಣ ರಚಿಸುವಲ್ಲಿ ಅವರ ಅಂಶದಾನವೂ ಹಿರಿದು.

೧೯೪೨ರ ಅಗಸ್ಟ್ ೮ರಂದು ಅಖಿಲ ಭಾರತ ಕೊಂಗ್ರೆಸ್ ಸಮಿತಿಯು ಮುಂಬಯಿಯಲ್ಲಿ ಸೇರಿ, ಮಹಾತ್ಮಾ ಗಾಂಧೀಜಿಯವರು ಮಂಡಿಸಿದ 'ಚಲೇ ಜಾವ್' (Quit India—'ಭಾರತದಿಂದ ತೊಲಗಿರಿ') ಚಳವಳದ ಕಾರ್ಯಕ್ರಮವನ್ನು ಅಂಗೀಕರಿಸಿತು. ಗಾಂಧೀಜಿಯವರೇ ಚಳವಳದ ಸರ್ವಾಧಿಕಾರಿಯಾದರು. ಲಾರ್ಡ್ ಲಿನ್‌ಲಿಥ್‌ಗೊರವರು ವೈಸರೋಯಿಯಾಗಿದ್ದ ಕಾಲವದು. ಗಾಂಧೀಜಿಯವರೇ ಮೊದಲಾಗಿ ಇನ್ನಿತರ ಧುರೀಣರನ್ನು ಬಂಧಿಸಲಾಯಿತು. ಮುಂಬಯಿಯಲ್ಲಿ ಬಂಧಿತರಾಗಿದ್ದ ಗಾಂಧೀಜಿ ಹಾಗೂ ಇನ್ನಿತರ ಕೊಂಗ್ರೆಸ್ ಸದಸ್ಯರು ಅಹಮ್ಮದ್ ನಗರದ ಕೋಟೆಗೆ ಒಯ್ಯಲ್ಪಟ್ಟರು. ೧೯೪೪ರ ವರೆಗೆ ಅವರೆಲ್ಲಿರುವರೆಂಬುದನ್ನು ಸರಕಾರವು ರಹಸ್ಯವಾಗಿಟ್ಟಿತ್ತು. ಮುಖಂಡರ ಬಂಧನವಾದುದೇ ತಡ; ದೇಶದಲ್ಲಿ ಮಹಾಕ್ರಾಂತಿಯೇ ನಡೆಯಿತು. ನಿರ್ಲಜ್ಜವಾಗಿ, ಮಾಡಬಾರದ ಹೇಯ ಕೃತ್ಯಗಳನ್ನೆಸಗಿತು ಸರಕಾರ. ಸಿಕ್ಕಸಿಕ್ಕಲ್ಲಿ ಗೋಳಿಬಾರು ನಡೆಯಿತು. ಲಾಥೀಪ್ರಹಾರಕ್ಕೆ ಆರಂಭವಾಯಿತು. ಆದರೆ, ಜನತೆಯು ಇಮ್ಮಡಿ ಹುರುಪಿನಿಂದ ಚಳವಳಕ್ಕೆ ಧುಮುಕಿತ್ತು. ರೈಲುಮಾರ್ಗಗಳನ್ನು ಕೀಳುವ, ತಂತಿಕಂಬಗಳನ್ನು ಕತ್ತರಿಸುವ, ಅಂಚೆ ಕಚೇರಿಗಳನ್ನು ಸುಡುವ—ಇವೇ

ಮೊದಲಾದ ವಿಧ್ವಂಸಕ ಕಾರ್ಯಕ್ರಮಗಳೂ ನಡೆದುವು. ೧೯೪೩ರ ಫೆಬ್ರುವರಿಯಲ್ಲಿ ಮಹಾತ್ಮರು ಸರಕಾರದ ಧೋರಣೆಯನ್ನು ಖಂಡಿಸಿ, ಇಪ್ಪತ್ತೊಂದುದಿನಗಳ ಉಪವಾಸವನ್ನಾರಂಭಿಸಿದರು. ಅವರನ್ನು ಇನ್ನೊಂದು ವರ್ಷ ಕಾರಾಗೃಹದಲ್ಲಿಯೇ ಸ್ಥಾನಬದ್ಧರಾಗಿರಿಸಿದರು. ೧೯೪೪ರಲ್ಲಿ ಕಸ್ತೂರಬಾರವರು ಆಗಾಖಾನರ ಅರಮನೆಯಲ್ಲಿ ನಿಧನಹೊಂದಿದರು. ಅಲ್ಲದೆ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿಯವರು ಪರಂಧಾಮವನ್ನೈದಿದರು. ಮಹಾತ್ಮರ ಆರೋಗ್ಯದ ಮೇಲೆ ಇವೆರಡೂ ಕೆಟ್ಟ ಪರಿಣಾಮ ಬೀರಿದುವು. ತತ್ಪರಿಣಾಮವಾಗಿ ಅವರು ಬೇನೆಬಿದ್ದುದರಿಂದ ಮೇ ತಾರೀಕು ೬, ೧೯೪೪ರಂದು ಅವರ ಬಿಡುಗಡೆಯಾಯಿತು. ಸ್ವಾತಂತ್ರ್ಯಾರ್ಥ ಕೊಂಗ್ರೆಸ್ಸು ಹೂಡಿದ ಚಳವಳಗಳಲ್ಲಿ ಕೊನೆಯದಾದ 'ಚಲೇ ಜಾವ್' ಚಳವಳಿಯು ಸಮಾಪ್ತವಾಯಿತು.

೧೯೪೫ನೆಯ ಇಸವಿ. ದ್ವಿತೀಯ ಜಾಗತಿಕ ಯುದ್ಧವು ಮುಕ್ತಾಯಗೊಂಡಿತು. ನಮ್ಮ ಮುಖಂಡರೆಲ್ಲರೂ ಬಿಡುಗಡೆ ಹೊಂದಿದರು. ಅದೇ ವರ್ಷದ ಮಾರ್ಚ್ ೨ರಂದು ಭಾರತದಲ್ಲಿ ವೈಸರಾಯಿಯಾಗಿದ್ದ ಲಾರ್ಡ್ ವೇವೆಲ್ಲರು ಲಂಡನ್ನಿಗೆ ತೆರಳಿ, ಜೂನಿನಲ್ಲಿ ಭಾರತಕ್ಕೆ ಮರಳಿದರು. ಜುಲೈ ತಿಂಗಳಲ್ಲಿ ಆರಂಭವಾದ ಸಿಮ್ಲಾ ಪರಿಷತ್ತಿನಲ್ಲಿ ಕೊಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳಲ್ಲಿ ಭಿನ್ನಾಭಿಪ್ರಾಯಗಳೆದ್ದು, ಪರಿಷತ್ತು ವಿಫಲವಾಯಿತು.

೧೯೪೫ನೇ ಜುಲೈಯಲ್ಲಿ ಇಂಗ್ಲೆಂಡಿನಲ್ಲಿ ಮಹಾಚುನಾವಣೆ ನಡೆದು ಎಟ್ಲಿಯವರ ಮಜೂರ ಪಕ್ಷ(Labour Party)ವು ಪ್ರಚಂಡ ವಿಜಯವನ್ನು ಗಳಿಸಿತು. ಕ್ಲೆಮೆಂಟ್ ರಿಚರ್ಡ್ ಎಟ್ಲಿಯವರು ಇಂಗ್ಲೆಂಡಿನ ಪ್ರಧಾನಿಯಾದರು. ಅವರು, ಭಾರತಕ್ಕೆ ಸ್ವಾತಂತ್ರ್ಯವನ್ನೀಯುವ ವಿಧಾನದ ಪರಿಶೀಲನೆಗಾಗಿ ಭಾರತ ಮಂತ್ರಿ ಲಾರ್ಡ್ ಪೆಥಿಕ್ ಲಾರೆನ್ಸ್, ನೌಕಾ ಮಂತ್ರಿ ಎ. ವಿ. ಅಲೆಗ್ಝಾಂಡರ್ ಹಾಗೂ ವಾಣಿಜ್ಯ ಮಂತ್ರಿ ಸರ್ ಸ್ಟೈಫೋರ್ಡ್ ಕ್ರಿಪ್ಸ್—ಈ ಮಂತ್ರಿತ್ರಯರ ನಿಯೋಗವನ್ನು ೧೯೪೬ರ ಮಾರ್ಚ್ ತಿಂಗಳಲ್ಲಿ ಭಾರತಕ್ಕೆ ಕಳುಹಿಸಿದರು. ನಿಯೋಗವು ಇಲ್ಲಿಗೆ ಬಂದು ಯೋಜನೆಯೊಂದನ್ನು ಸಿದ್ಧಪಡಿಸಿ, ಪ್ರಕಟಿಸಿತು. ಇದರ ಅನ್ವಯ ಭಾರತದ ನವಶಾಸನವನ್ನು ತಯಾರಿಸಲು ೩೮೯ ಮಂದಿ ಸದಸ್ಯರ ಒಂದು ಘಟನಾ ಸಮಿತಿಯ ರಚನೆಯಾಗಿ ಅದರಲ್ಲಿ ೯೩ ಸ್ಥಾನಗಳನ್ನು

ದೇಶೀಯ ಸಂಸ್ಥಾನಗಳಿಗೆ, ೪ ಸ್ಥಾನಗಳನ್ನು ಚಿಕ್ಕ ಪ್ರಾಂತ್ಯಗಳಿಗೆ, ೪ ಸಿಖ್ಖರಿಗೆ ೭೮ ಮುಸ್ಲಿಮರಿಗೆ, ೨೧೦ ಉಳಿದವರಿಗೆ—ಹೀಗೆ ಸದಸ್ಯತ್ವವನ್ನು ಹಂಚಿಹಾಕಲಾಯಿತು. ಈ ಸಮಿತಿಯು ಭಾರತದ ಹಾಗೂ ಅದರ ಪ್ರಾಂತ್ಯಗಳ ಶಾಸನವನ್ನು ತಯಾರಿಸಬೇಕೆಂದು ನೇಮಕವಾಯಿತು. ನವಶಾಸನ ನಿರ್ಮಾಣದ ತನಕ ದೆಹಲಿಯಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರಕಾರವು ಪಂಡಿತ್ ಜವಾಹರಲಾಲ ನೆಹರೂರವರ ಪ್ರಧಾನ ಮಂತ್ರಿತ್ವದಲ್ಲಿ ಸ್ಥಾಪಿಸಲ್ಪಟ್ಟಿತು.

೧೯೪೬ರ ದಶಂಬರದಲ್ಲಿ ಘಟನಾ ಸಮಿತಿಯು ಸಭೆಸೇರಿದರೂ, ಮುಸ್ಲಿಂ ಲೀಗು ತನ್ನ ಪಾಕಿಸ್ತಾನ ವಾದವನ್ನು ಮುಂದಿರಿಸಿಕೊಂಡು ಇದರೊಡನೆ ಸಹಕರಿಸಲಿಲ್ಲ. ಆದರೆ ದಶಂಬರ ೯ರಂದು ಲೀಗಿನ ಸಹಕಾರವಿಲ್ಲದೇ ಘಟನಾ ಸಮಿತಿಯು ಕಾರ್ಯಾರಂಭ ಮಾಡಿತು. ೧೯೪೭ರ ಫೆಬ್ರುವರಿ ೨೦ರಂದು ಆಂಗ್ಲ ಪ್ರಧಾನಿ ಎಟ್ಲಿಯವರು, ೧೯೪೮ರ ಜೂನಿನೊಳಗಾಗಿ ಭಾರತವನ್ನು ಸಂಪೂರ್ಣವಾಗಿ ಭಾರತೀಯರಿಗೇ ಬಿಟ್ಟುಕೊಡಲಾಗುವುದೆಂದು ಘೋಷಣೆ ಹೊರಡಿಸಿದರು. ಅಲ್ಲದೇ ಅದಕ್ಕಾಗಿ ಬೇಕಾದ ವ್ಯವಸ್ಥೆಯನ್ನು ಮಾಡಲು ೧೯೪೭ರ ಜೂನ್ ೩ರಂದು ವೇವೆಲ್ಲರ ಸ್ಥಾನದಲ್ಲಿ ಲಾರ್ಡ್ ಲೂಯಿ ಮೌಂಟಬೇಟನರನ್ನು ಭಾರತಕ್ಕೆ ಕಳುಹಿಸಲಾಯಿತು. ಅವರು ಭಾರತೀಯ ಮುಖಂಡರೊಡನೆ ಸಮಾಲೋಚನೆ ನಡೆಸಿದರು. ಜಿನ್ನಾರವರು ತಮ್ಮದೊಂದು ಪ್ರತ್ಯೇಕ ಜಾತೀಯತಾ ರಾಷ್ಟ್ರವು ರಚನೆಯಾಗಬೇಕೆಂದು ಛಲಹಿಡಿದುದರಿಂದ ಮೌಂಟ್ ಬೇಟನರು ವಿಭಜನೆಯ ಯೋಜನೆಯನ್ನು ಸೂಚಿಸಿದರು. ಅಖಂಡವಾಗಿ ದಾಸ್ಯದಲ್ಲಿರುವುದಕ್ಕಿಂತ, ವಿಭಜನೆ ಹೊಂದಿ ಸ್ವತಂತ್ರ ರಾಷ್ಟ್ರವಾಗಿ ಉಳಿಯುವುದೇ ಲೇಸೆಂದು ನಮ್ಮ ಮುಖಂಡರು, ನಿರುಪಾಯರಾಗಿ ವಿಭಜನೆಯ ಯೋಜನೆಯನ್ನೊಪ್ಪಿಕೊಂಡರು. ಜೂನ್ ೩ರಂದು ಈ ಯೋಜನೆಯನ್ನು ಪ್ರಕಟಿಸಲಾಯಿತು. ಶತಮಾನಗಳಿಂದ ಪಾರತಂತ್ರ್ಯದ ಕತ್ತಲೆಯಲ್ಲಿ ತೊಳಲಾಡುತ್ತಿದ್ದ ಭಾರತೀಯ ಜನತೆಗೆ ಸ್ವಾತಂತ್ರ್ಯ ರವಿಯು ಕಾಣಿಸಿಕೊಂಡನು. ೧೯೪೭ರ ಆಗಸ್ಟ್ ೧೫ರಂದು ಭಾರತಮಾತೆ ಆಂಗ್ಲರ ಹಿಡಿತದಿಂದ ಪಾರಾಗಿ ಸ್ವತಂತ್ರಳಾದಳು. ದೀರ್ಘಕಾಲದ ಹೋರಾಟವು ಅಂದಿಗೆ ಮುಗಿಯಿತು. ಮುಸ್ಲಿಂ ಲೀಗು ತನ್ನ ಜಾತೀಯತಾ ಧೋರಣೆಯನ್ನು ಹಿಡಿದೆತ್ತಿ ಜಿನ್ನರ ನೇತೃತ್ವದಲ್ಲಿ ಪಾಕಿಸ್ತಾನವನ್ನು ಪಡೆಯಿತು.

೧೯೪೭ರ ಅಗಸ್ಟ ೧೫ರಂದು ಸ್ವತಂತ್ರವಾದ ಭಾರತೀಯ ಜನತೆಯು ೧೯೫೦ರ ಜನೆವರಿ ೨೬ರಂದು "ಸಂಪೂರ್ಣ ಪ್ರಭುತ್ವಸಂಪನ್ನ ಲೋಕಸತ್ತಾತ್ಮಕ ಗಣರಾಜ್ಯ"ವನ್ನು ಸ್ಥಾಪಿಸಿತು. ಡಾ| ರಾಜೇಂದ್ರ ಪ್ರಸಾದರು ಭಾರತದ ಪ್ರಥಮ ರಾಷ್ಟ್ರಪತಿಗಳಾದರು.

೧೯೫೭ಕ್ಕೊಳಗೆ ಫ್ರೆಂಚರು ತಮ್ಮ ಅಧಿಕಾರಕ್ಕೊಳಪಟ್ಟ ಭಾರತದ ಭಾಗಗಳನ್ನು ಶಾಂತರೀತಿಯಿಂದ ಭಾರತದ ಒಕ್ಕೂಟಕ್ಕೆ ಬಿಟ್ಟುಕೊಟ್ಟಿರುವರು. ಇನ್ನು ಪೋರ್ಚುಗೀಸರ ವಶದಲ್ಲಿರುವ ಗೋವಾ, ದಾಮನ್, ದಿಯೂಗಳು ಭಾರತಕ್ಕೆ ಸೇರ್ಪಡೆಯಾಗುವುದೊಂದು ಉಳಿದಿದೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ವಿಶೇಷ — ಘಟನೆಗಳು ನಡೆದ ವರ್ಷಗಳು —

ವರ್ಷಗಳು.	ಘಟನೆಗಳು.
೧೮೫೭.	ಭಾರತೀಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ.
೧೮೮೫.	ಭಾರತ ರಾಷ್ಟ್ರೀಯ ಕೊಂಗ್ರೆಸ್‌ನ ಸ್ಥಾಪನೆ.
೧೯೦೫.	ವಂಗ ವಿಭಜನೆ; ಸ್ವದೇಶೀ ಚಳವಳ.
೧೯೧೧.	ದಿಲ್ಲೀ ದರ್ಬಾರು; ವಂಗದ ಐಕ್ಯ.
೧೯೧೫.	ಹೋಮ್‌ರೂಲ್ ಚಳವಳ.
೧೯೧೯.	ಪಂಜಾಬದ ಹತ್ಯಾಕಾಂಡ; ಮೊಂಟ್-ಫೋರ್ಡ್ ಸುಧಾರಣೆ; ರೌಲೆಟ್ ಆಕ್ಟ್.
೧೯೨೦.	ಅಸಹಕಾರ ಚಳವಳ.
೧೯೨೨.	ಸ್ವರಾಜ್ಯ ಪಕ್ಷದ ಸ್ಥಾಪನೆ.
೧೯೨೭.	ಪೂರ್ಣ ಸ್ವರಾಜ್ಯದ ಗೊತ್ತುವಳಿ; ಸೈಮನ್ ಕಮಿಷನಿಗೆ ಬಹಿಷ್ಕಾರ.
೧೯೨೮.	"ನೆಹರೂ ವರದಿ".
೧೯೩೦.	ಸಂಪೂರ್ಣ ಸ್ವರಾಜ್ಯದ ಗೊತ್ತುವಳಿಯ ಘೋಷಣೆ; ಉಪ್ಪಿನ ಸತ್ಯಾಗ್ರಹ.
೧೯೩೫.	ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್.
೧೯೪೨.	"ಚಲೇ ಜಾವ್" ಚಳವಳ.
೧೯೪೬.	ತಾತ್ಕಾಲಿಕ ಸರಕಾರ ಸ್ಥಾಪನೆ.
೧೯೪೭ ಅಗಸ್ಟ ೧೫.	ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದುದು.
೧೯೫೦ ಜನವರಿ ೨೬.	ಭಾರತವು ಸಂಪೂರ್ಣ ಪ್ರಭುತ್ವಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವೆಂದು ಸಾರಲ್ಪಟ್ಟಿತು.

Edited, Printed & Published by K. V. Shenoy
at The Prabhat Printers, Ltd., Mangalore.